ಸರ್ಕಾರಿ ಜಮೀನಿನಲ್ಲಿ ಭೂರಹಿತರು ನಿವೇಶನರಹಿತ ಬಡವರು ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರಿಗೆ ಸ್ಥಳ ಮಂಜೂರಾತಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಕ್ರಮಕೈಗೊಳ್ಳುವರು.

ಈ). ಯಾವ ರೀತಿಯಲ್ಲಿ ಯಾವ ನಮೂನೆಯಲ್ಲಿ ಫಲಾನುಭವಿಗಳು ಅರ್ಜಿ ಸಲ್ಲಿಸಬೇಕು?

ಆಶ್ರಯ ನಿವೇಶನ ಯೋಜನೆಯಡಿ ನಿವೇಶನ ಪಡೆಯಲು ಅರ್ಜಿ ನಮೂನೆ 1–ನ್ನು ಆಯಾ ಸ್ಥಳೀಯ ಸಂಸ್ಥೆಯಿಂದ ಪಡೆದು ತುಂಬಿ ಸಹಿ ಮಾಡಿ ಸ್ಥಳೀಯ ಸಂಸ್ಥೆಗೆ ಸಲ್ಲಿಸಬೇಕು.

ಸಂಖ್ಯೆ: ವಇ 21 ಹೆಚ್ ಎಎಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನಸಭೆ

312 ಶ್ರೀ ಹೆಚ್.ಎಸ್.ಪ್ರಕಾಶ್ (ಹಾಸನ)

ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ ವಸತಿ ಹಾಗೂ ಮುಜರಾಯಿ ಸಚಿವರು.

ಅ) ರಾಜ್ಯ ಗೃಹ ಮಂಡಳಿಯು ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಚೆನ್ನಪಟ್ಟಣ ಗ್ರಾಮದ ಬಳಿ ನಿವೇಶನ ಹಾಗೂ ಮನೆಗಳಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದು ನಿಜವೇ; ಹಾಗಿದ್ದಲ್ಲಿ, ವಶಪಡಿಸಿ ಕೊಂಡಿರುವ ಜಮೀನೆಷ್ಟು?

ಹೌದು ನಿಜ.

ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ 153 ಎಕರೆಗಳಾಗಿರುತ್ತದೆ.

ಆ) ಈ ಜಮೀನಿನಲ್ಲಿ ಹಂಚಿಕೆಯನ್ನು ಮಾಡಿರುವ ನಿವೇಶನಗಳೆಷ್ಟು; ಹಾಗೂ ಮನೆಗಳೆಷ್ಟು; ಇದಕ್ಕಾಗಿ ಸಾರ್ವಜನಿಕರಿಂದ ಬಂದ ಅರ್ಜಿಗಳೆಷ್ಟು,

ಸದರಿ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸುತ್ತಿದ್ದು, ಬಡಾವಣೆಯ ವಿನ್ಯಾಸ ನಕ್ಷೆ, ಅಂತಿಮಗೊಳ್ಳುವ ಹಂತದಲ್ಲಿದೆ. ಒಟ್ಟು ಅಂದಾಜು 1600 ನಿವೇಶನಗಳನ್ನು ರಚನೆ ಮಾಡಬಹುದಾಗಿರುತ್ತದೆ. ಈ ಪೈಕಿ 200 ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸುವ ಉದ್ದೇಶವಿದೆ. ಸದರಿ ಬಡಾವಣೆಯ ಬೇಡಿಕೆ ಸಮೀಕ್ಷೆಯ ಪ್ರಕಾರ 6515 ಅರ್ಜಿಗಳು ಬಂದಿದ್ದು.

ಇ) ಸಾರ್ವಜನಿಕರ ನಿರಾಸಕ್ತಿಯಿಂದಾಗಿ ನಿವೇಶನಗಳನ್ನು ಪೂರ್ತಿಯಾಗಿ ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇದರಲ್ಲಿ 4541 ಅರ್ಜಿದಾರರು ಆರಂಭಿಕ ಠೇವಣಿಯನ್ನು ಪಾವತಿಸಿರುತ್ತಾರೆ. ಇನ್ನೂ ನಿವೇಶನ ಮತ್ತು ಮನೆಳನ್ನು ಹಂಚಿಕೆ ಮಾಡಿರುವುದಿಲ್ಲ. ನಿವೇಶನ/ಮನೆಗಳನ್ನು ಕೋರಿ ಮೇಲೆ ವಿವರಿಸಿದಂತೆ 6515 ಅರ್ಜಿಗಳು ನೋಂದಣಿಯಾಗಿದ್ದು ಇದರಲ್ಲಿ 4541 ಅರ್ಜಿದಾರರು ಆರಂಭಿಕ ಠೇವಣಿಯನ್ನು ಪಾವತಿಸಿರುವುದನ್ನು ಗಮನಿಸಿದಾಗ ಸಾರ್ವಜನಿಕರಿಗೆ ಆಸಕ್ತಿ ಇರುವುದು ಕಂಡು ಬಂದಿರುತ್ತದೆ.

ಈ) ಹಾಗಿದ್ದಲ್ಲಿ, ಹಾಸನ ತಾಲ್ಲೂಕಿನ ಕಸಬಾ ಹೋಬಳಿ ಹರಳಹಳ್ಳಿ, ದಾಸರಕುಪ್ಪ ಮತ್ತು ಚಿಕ್ಕಕೊಂಡಗೊಳದ ಸುತ್ತ ಜಮೀನನ್ನು ನಿವೇಶನ ಹಾಗೂ ಮನೆಗಳಿಗಾಗಿ 4(1) ನೀಟಿಫಿಕೇಶನ್ ನೀಡಿರುವುದು ನಿಜವೇ;

ಬೇಡಿಕೆ ಸಮೀಕ್ಷೆ ಪ್ರಕಾರ ಹೆಚ್ಚಿನ ಅರ್ಜಿಗಳು ಬಂದಿರುವುದರಿಂದ ಈಗಾಗಲೇ ನಿರ್ಮಾಣವಾಗುತ್ತಿರುವ ಬಡಾವಣೆಯಲ್ಲಿ ಎಲ್ಲರಿಗೂ ನಿವೇಶನ ಹಂಚಿಕೆ ಮಾಡಲು ಸಾಧ್ಯವಿಲ್ಲದಿರುವುದರಿಂದ ಹಾಸನ ತಾಲ್ಲೂಕು, ಕಸಬಾ ಹೋಬಳಿ, ಸತ್ಯ ಮಂಗಲ, ಮಾವಿನಹಳ್ಳಿ, ಚಿಕ್ಕಕೊಂಡಗೊಳ ಗ್ರಾಮಕ್ಕೆ ಸೇರಿದ ಒಟ್ಟು 597ಎಕರೆ ವಿಸ್ತೀರ್ಣದ ಜಮೀನನ್ನು ಭೂ-ಸ್ವಾಧೀನಪಡಿಸಿಕೊಳ್ಳಲು 4(1)ರ ಅಧಿಸೂಚನೆ ಹೊರಡಿಸಿರುವುದು ನಿಜವಿರುತ್ತದೆ. ಆದರೆ ಹರಳಹಳ್ಳಿ ಮತ್ತು ದಾಸರಕೊಪ್ಪ ಗ್ರಾಮಗಳಿಗೆ ಸೇರಿದಂತೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನಡೆಸಿರುವುದಿಲ್ಲ.

ಉ) ನಿವೇಶನಗಳಿಗಾಗಿ ಸಾರ್ವಜನಿಕರಿಂದ ಮನವಿಗಳಿಲ್ಲದಿದ್ದರೂ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಮೇಲೆ ವಿವರಿಸಿದಂತೆ ಬೇಡಿಕೆ ಸಮೀಕ್ಷೆಯಲ್ಲಿ ಒಟ್ಟು 6515 ಅರ್ಜಿಗಳು ಬಂದಿದ್ದು, ಇದರಲ್ಲಿ 4541 ಅರ್ಜಿದಾರರು ಪ್ರಾರಂಭಿಕ ಠೇವಣಿಯನ್ನು ಪಾವತಿಸಿರುವುದರಿಂದ ಬೇಡಿಕೆ ಪೂರೈಸಲು ಸದರಿ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ.

ಊ) ಹಾಗಿದ್ದಲ್ಲಿ, ಈ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲಾಗುವುದೇ (ವಿವರಗಳನ್ನು ನೀಡುವುದು.)

ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ವಇ ಕಗೃಮಂ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಮತ್ತು ಮುಜರಾಯಿ ಸಚಿವರು.